ರಾಜ್ಯ ಸರ್ಕಾರಕ್ಕೆ ಅರಣ್ಯ ಆದಾಯ ಕಡೆಯಿಂದ ಬರಬೇಕಾದ ಹಣ

೧೦೩. (೨೯೫) ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯ ಸರ್ಕಾರಕ್ಕೆ ''ಅರಣ್ಯ ಆದಾಯ'' ಕಡೆಯಿಂದ ಬರಬೇಕಾಗಿರುವ ಮೊತ್ತ ಎಷ್ಟು ?

(ಆ) ಖಾಸಗಿ ವ್ಯಕ್ತಿಗಳು, ಖಾಸಗೀ ಕಂಪನಿಗಳು ಸರ್ಕಾರೀ ನಿಗಮಗಳು, ಸರ್ಕಾರಿ ಇಲಾಖೆಗಳಿಂದ ರಾಜ್ಯ ಬೊಕ್ಕಸಕ್ಕೆ ಬರಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು ? (ಪ್ರತ್ಯೇಕ ಬಾಕಿ ವಿವರಗಳನ್ನು ಓದಗಿಸುವುದು)

(ಇ) ಈ ಬಾಕಿ ವಸೂಲಾತಿಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಅರಣ್ಯ ಆದಾಯ ಕಡೆಯಿಂದ ಬರಬೇಕಾಗಿರುವ ಮೊತ್ತ ಸುಮಾರು : ೨೧.೬೨ ಕೋಟಿ ರೂ. ಗಳು.

(ಆ)	(೧)	ಇಲಾಖೆಯ ಕ್ರಮಕ್ಕೆ ಒಳಪಟ್ಟಿರುವ ಮೊತ್ತ	೧೫.೧೬ ಕೋಟಿ
	(೨)	ವಿನಾಯ್ತಿಗೆ ಶಿಫಾರಸ್ಸು ಮಾಡಿರುವ ಮೊತ್ತ	೦.೧೭ ,,
	(೩)	ಸರ್ಕಾರಿ ಇಲಾಖೆಗಳು, ಖಾಸಗಿ ಕಂಪನಿಗಳು, ಸರ್ಕಾರಿ ನಿಗಮಗಳಿಂದ ಬರಬೇಕಾದ ಮೊತ್ತ	೫.೯೬ ಕೋಟಿ
	(೪)	ಕಂದಾಯ ಇಲಾಖೆಗೆ ಕಾನೂನಿನಂತೆ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಒಳಪಟ್ಟಿರುವ ಮೊತ್ತ	೦.೩೩ ಕೋಟಿ
		ಒಟ್ಟು	೨೧.೬೨ ಕೋಟಿ

(ಇ) ಅರಣ್ಯ ಇಲಾಖೆಗೆ ಮೇಲೆ ನಮೂದಿಸಿದ ಬಾಕಿದಾರರಿಂದ ಬರಬೇಕಾದ ಮೊತ್ತವನ್ನು ಮುಂದಿನ ಅವಧಿಗಳಲ್ಲಿ ಕಾಲಕಾಲಕ್ಕೆ ಕಾನೂನಿನಂತೆ ವಸೂಲಿ ಮಾಡಲಾಗುತ್ತದೆ.

ರಾಜ್ಯದಲ್ಲಿ ಕಾರ್ಖಾನೆಗಳಿಗೆ ವಿತರಣೆ ಮಾಡುತ್ತಿರುವ ವಿದ್ಯುತ್ ಪೂರೈಕೆಯ ಬಗ್ಗೆ

೧೦೪. (೨೩೪) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಕಾರ್ಖಾನೆಗಳಿಗೆ ಯಾವ ಯಾವ ದರದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುವುದು ?

(ಆ) ರಾಜ್ಯದಲ್ಲಿರುವ ಎಲ್ಲಾ ರೀತಿಯ ಕಾರ್ಖಾನೆಗಳಿಗೆ ಒಂದೇ ದರದಲ್ಲಿ ಪೂರೈಕೆ ಮಾಡಲಾಗುವುದೇ ?

(ಇ) ಹಾಗಿದ್ದಲ್ಲಿ ಸದರಿ ಕಾರ್ಖಾನೆಗಳಿಂದ ಸರಕಾರಕ್ಕೆ ಬರಬೇಕಾದ ಬಾಕಿ ಹಣವಷ್ಟು ? (ಕಾರ್ಖಾನೆಗಳ ಹೆಸರು ವಿವರ ಒದಗಿಸುವುದು)

(ಈ) ಸದರಿ ದಿನಕ್ಕೆ ಹಣವನ್ನು ವಸೂಲು ಮಾಡಲಾಗಿದೆಯೇ ? ಅಥವಾ ಮಾಡದೇ ಇರಲು ಕಾರಣಗಳೇನು ?

(ಉ) ಇದರಲ್ಲಿ ಸರ್ಕಾರದ ಹಣ ಪೋಲಾಗಲು ಅಧಿಕಾರಿಗಳು ಶಾಮಿಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?